ಕರ್ನಾಟಕ ಸರ್ಕಾರ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ
ರಾಜ್ಯ ನೀರು ಮತ್ತು ನೈರ್ಮಲ್ಯ ಮಿಷನ್
ಸಂವಹನ ಮತ್ತು ಸಾಮರ್ಥ್ಯ ಅಭಿವೃದ್ಧಿ ಘಟಕ

ಸಂಖ್ಯೆ : ಗ್ರಾಅಪ/ರಾನೀನೈಮಿ/ನಿಭಾಅ/ಯುಸಿ:10/2012-13 1334. ದಿನಾಂಕ :05.10.2013

ರವರಿಗೆ, **ನೆನಪೋಲೆ**

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು
ಬಾಗಲಕೋಟೆ/ಬೆಂ(ಗ್ರಾ)/ಬೆಂ(ನ) ಬೀದರ್/ಬಿಜಾಪುರ/ರಾಯಚೂರು/
ಚಾಮರಾಜನಗರ/ಚಿಕ್ಕಮಗಳೂರು/ಚಿತ್ರದುರ್ಗ/ದಾವಣಗೆರೆ/ಧಾರವಾಡ/ಉ.ಕ/
ಗದಗ/ಹಾವೇರಿ/ಕೋಲಾರ/ಕೊಪ್ಪಳ/ಮಂಡ್ಯ/ದ.ಕ/ಮೈಸೂರು/ತುಮಕೂರು/ಯಾದಗಿರಿ.
ಜಿಲ್ಲಾ ಪಂಚಾಯತ್

ಮಾನ್ಯರೇ,

ವಿಷಯ: **2012-13ನೇ ಸಾಲಿನ ಲೆಕ್ಕ ಪರಿಶೋಧನಾ ವರದಿ ಮತ್ತು ಹಣಬಳಕೆ ಪ್ರಮಾಣ ಪತ್ರ ಸಲ್ಲಿಸುವ ಕುರಿತಂತೆ.**

ಉಲ್ಲೇಖ:
1. ಈ ಕಚೇರಿಯ ಪತ್ರ ಸಮ ಸಂಖ್ಯೆ ದಿನಾಂಕ: 20.05.2013 &10.07.2013
2. ಕೇಂದ್ರ ಸರ್ಕಾರವು ದಿನಾಂಕ:01.04.2012 ರಿಂದ ಹೊರಡಿಸಿರುವ ಪರಿಷ್ಕೃತ ಯೋಜನೆಯ ಮಾರ್ಗಸೂಚಿ.
3. ಈ ಕಚೇರಿಯ ಅ.ಸ.ಪತ್ರ ಸಮ ಸಂಖ್ಯೆ ದಿನಾಂಕ:04.09.2013
4. ಈ ಕಚೇರಿಯ ಪತ್ರ ಸಂ.ರಾನೀನೈಮಿ./ನಿಭಾಅ/51/2012-13 ದಿ.05.09.2013

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ನಿರ್ಮಲ ಭಾರತ್ ಅಭಿಯಾನ ಕಾರ್ಯಕ್ರಮದಡಿ 2012-13ನೇ ಸಾಲಿನ ಲೆಕ್ಕಪರಿಶೋಧನಾ ವರದಿಯನ್ನು ಉಲ್ಲೇಖ(4) ಪತ್ರದನ್ವಯ ನಿಮ್ಮ ಜಿಲ್ಲೆಯಿಂದ ಕೇಂದ್ರ ಕಚೇರಿಗೆ ಸಂಬಂಧಪಟ್ಟ ವಿಷಯ ನಿರ್ವಾಹಕರು ಹಾಗೂ ಲೆಕ್ಕಾಧಿಕ್ಷಕರು ಹಾಜರಾಗಿದ್ದು, ಲೆಕ್ಕ ಪರಿಶೋಧನೆ ವರದಿ ಹಾಗೂ ಹಣ ಬಳಕೆ ಪ್ರಮಾಣ ಪತ್ರದಲ್ಲಿ ತಿದ್ದುಪಡಿಯಾಗಿರುವಂತೆ ಸರಿಪಡಿಸಿ ಶುದ್ಧಪ್ರತಿಯನ್ನು ತುರ್ತಾಗಿ ಸಲ್ಲಿಸಲು ಸೂಚಿಸಲಾಗಿದ್ದರೂ, ಆನ್‌ಲೈನ್‌ನಲ್ಲಿ ದಾಖಲಿಸಿರುವ ಭೌತಿಕ& ಆರ್ಥಿಕ ಪ್ರಗತಿಗೂ ಹಾಗೂ ಲೆಕ್ಕಪರಿಶೋಧನೆ ವರದಿಗೂ ವ್ಯತ್ಯಾಸವಿರುವುದಕ್ಕೆ, ಉಳಿದಂತೆ ಹಾಜರಾಗಿದ್ದ ಅಧಿಕಾರಿಗಳೊಂದಿಗೆ ಚರ್ಚಿಸಿದಂತೆ ಪತ್ರವನ್ನು ಸಲ್ಲಿಸಬೇಕಾಗಿದ್ದು ಈವರೆವಿಗೂ ನಿಮ್ಮ ಜಿಲ್ಲೆಯಿಂದ ವರದಿ ಬಂದಿರುವುದಿಲ್ಲ.

ಈ ನಿಟ್ಟಿನಲ್ಲಿ ತುರ್ತಾಗಿ 2012-13ನೇ ಸಾಲಿನ ಲೆಕ್ಕ ಪರಿಶೋಧನಾ ವರದಿ ಹಾಗೂ ಹಣಬಳಕೆ ಪ್ರಮಾಣ ಪತ್ರವನ್ನು ಸಂಬಂಧಪಟ್ಟ ವಿಷಯ ನಿರ್ವಾಹಕರು/ಲೆಕ್ಕ ಅಧೀಕ್ಷಕರು ಖುದ್ದಾಗಿ ಹಾಜರಾಗಿ ಸಲ್ಲಿಸುವಂತೆ ಮತ್ತೊಮ್ಮೆ ಗಮನಕ್ಕೆ ತರಲಾಗಿದೆ.

ತಮ್ಮ ವಿಶ್ವಾಸಿ,

Neena

ಮಿಷನ್ ನಿರ್ದೇಶಕರ ಪರವಾಗಿ,
ರಾ.ನೀ.ನೈ.ಸಂಸ್ಥೆ ಹಾಗೂ ಸರ್ಕಾರದ
ಪದನಿಮಿತ್ತ ಅಪರ ಕಾರ್ಯದರ್ಶಿಗಳು,
ಗ್ರಾ ಅ ಮತ್ತು ಪಂಚಾಯತ್ ರಾಜ್ ಇಲಾಖೆ

ಪ್ರತಿಯನ್ನು:-

1. ಪ್ರಧಾನ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಇವರ ಮಾಹಿತಿಗಾಗಿ ಸಲ್ಲಿಸಿದೆ.